

# ಸಿಂಪಲ್ ಮದುವೆ

ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ತಣುಕು ಪಟ್ಟಣದಲ್ಲಿ ಮೂರು ವರ್ಷಗಳ ಹಿಂದೆ ನಡೆದ ಆ ಪ್ರಸಿದ್ಧ ಮದುವೆಯ ನೆನಪು ನಿಮಗಿದೆಯೇ? ಮುಕ್ಕಮಲ ಆಶ್ರಮದ ಶ್ರೀಧರ ಸ್ವಾಮೀಜಿ ಎಂಬ 'ದೇವ ಮಾನವ'ನ ಮಗಳ ಮದುವೆ, ಥೇಟ್ ದೇವಾನುದೇವತೆಗಳ ಪಾಣಿಗ್ರಹಣದಂತೆಯೇ ನಡೆದಿತ್ತು. ಮೈತುಂಬಾ ಒಂದಿಂಚೂ ಬಿಡದಂತೆ ಬಂಗಾರದ ಆಭರಣಗಳನ್ನು ತೊಟ್ಟು, ತಲೆ ಮೇಲೊಂದು ಕಿರೀಟವನ್ನೂ ಇಟ್ಟುಕೊಂಡಿದ್ದ ವಧು, 'ಲಕ್ಷ್ಮಿ'ಯ ರೂಪದಲ್ಲಿ ಕಾಣಿಸಿಕೊಂಡಿದ್ದಳು. ರೇಷ್ಮೆಯ ಧೋತಿಯನ್ನು ಉಟ್ಟುಕೊಂಡು, ಕಂಠೀಹಾರ, ಭುಜಕೀರ್ತಿ, ತೋಳಬಂದಿ ಮತ್ತಿತರ ಮಣಭಾರದ ಆಭರಣಗಳನ್ನು ಧರಿಸಿಕೊಂಡು, ತಲೆಯ ಮೇಲೊಂದು ಕಿರೀಟವನ್ನು ಬೇರೆ ಇಟ್ಟುಕೊಂಡಿದ್ದ ವರನೂ 'ವಿಷ್ಣು'ವಿನ ಅವತಾರ ಎತ್ತಿ ಬಂದಂತಿದ್ದ. ವಧು–ವರರ ತಂದೆ–ತಾಯಿಗಳು, ಸಂಬಂಧಿಗಳು ಅಕ್ಷರಶಃ ದೇವಾನುದೇವತೆಗಳ ರೂಪವನ್ನು ತಾಳಿ ನಿಂತಿದ್ದರು. ಮದುವೆ ನಡೆದ ಆ ಛತ್ರಕ್ಕೆ ಒಂದು ರೀತಿಯಲ್ಲಿ ಇಂದ್ರನ ಅರಮನೆಯ ವೈಭೋಗವೇ ಬಂದಿತ್ತು. ತಣುಕು ಪಟ್ಟಣದ ಸಾವಿರಾರು ಮಂದಿ ಈ ಮದುವೆಗೆ ಸಾಕ್ಷಿಯಾಗುವ ಅವಕಾಶವನ್ನು ಗಿಟ್ಟಿಸಿದ್ದರು. ಭೂಲೋಕಕ್ಕೆ ಇಳಿದಿದ್ದ 'ದೇವಲೋಕ'ದ ಆ ಸಂಭ್ರಮವನ್ನು ಅವರು ಕಣ್ತುಂಬಿಕೊಂಡಿದ್ದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಯಾವುದಾದರೂ ಮದುವೆಯಲ್ಲಿ ನೀವು ಭಾಗಿಯಾಗಿದ್ದರೆ ಅದರ ವೈಭವ ಎಂತಹದ್ದು ಎನ್ನುವುದು ನಿಮಗೆ ಗೊತ್ತಿರುತ್ತದೆ. ಪ್ರಭಾವಿ ರಾಜಕಾರಣಿಗಳು, ಉದ್ಯಮಿಗಳು ಹಾಗೂ ಸಿನಿಮಾ ತಾರೆಗಳಿಗೆ, ಮಕ್ಕಳ ಮದುವೆಯಲ್ಲಿ ತಮ್ಮ ಸಿರಿವಂತಿಕೆಯನ್ನೆಲ್ಲ ಒಮ್ಮೆ ಮಿಂಚಿಸಿ ತೋರಿಸುವಂತಹ ಖಯಾಲಿ. ಆಮಂತ್ರಣ ಪತ್ರಿಕೆಗಳ ಅಚ್ಚು ಹಾಕಿಸುವ ಪ್ರಕ್ರಿಯೆಯಿಂದಲೇ ಆ ಸಿರಿತನದ ಉಮೇದು ಉಕ್ಕಿ ಹರಿಯಲು ಆರಂಭಿಸುತ್ತದೆ. ಬಳ್ಳಾರಿ ಭಾಗದ ಮಾಜಿ ಸಚಿವರೊಬ್ಬರ ಮಗಳ ಮದುವೆಗೆ ವಧು–ವರರು ಹಾಗೂ ಅವರ ಸಂಬಂಧಿಗಳು ಹಾಡು ಹೇಳುತ್ತಾ, ಆಮಂತ್ರಿಸುವ ವಿಡಿಯೊವನ್ನೇ ಮಾಡಿಸಿ, ಆ ವಿಡಿಯೊ ತುಣುಕಿರುವ ಸಾಧನವನ್ನೇ ಆಮಂತ್ರಣ ಪತ್ರಿಕೆಯನ್ನಾಗಿ ರೂಪಿಸಲಾಗಿತ್ತು. ಆಮೇಲೆ ಅರಮನೆ ಮೈದಾನದಲ್ಲಿ ತಿರುಪತಿ ದೇವಸ್ಥಾನದ ಸನ್ನಿವೇಶವನ್ನೇ ಮರುಸೃಷ್ಟಿಸಿದ್ದ ಅವರು, ಆ ವೈಭವದಲ್ಲಿ ಮಗಳನ್ನು ಧಾರೆ ಎರೆದು ಕೊಟ್ಟಿದ್ದರು.

ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜೆ. ಜಯಲಲಿತಾ ಅವರ ದತ್ತುಪುತ್ರನ ಮದುವೆಯನ್ನು ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ 'ನ ಭೂತೋ ನ ಭವಿಷ್ಯತಿ' ಎನ್ನುವ ರೀತಿಯಲ್ಲಿ ಮಾಡಿದ್ದನ್ನು ಯಾರೇ ಆಗಲಿ ಮರೆಯುವುದುಂಟೇ? ದೇಶದ ಉದ್ದಗಲಕ್ಕೂ ಆಗ ಈ ವಿವಾಹ ಮಹೋತ್ಸವದ್ದೇ ಮಾತು. ಮದುವೆಯ ಸಂದರ್ಭದಲ್ಲಿ ಬಳಕೆಯಾದ ನೂರಾರು ಕೆ.ಜಿ. ತೂಕದ ಚಿನ್ನದ ಆಭರಣಗಳು, ಸಾವಿರಾರು ರೇಷ್ಮೆ ಸೀರೆಗಳು, ಅಸಂಖ್ಯಾತ ಹೊಸ ಚಪ್ಪಲಿ ಜೋಡುಗಳ ಕುರಿತು ಹಲವು ದಂತಕಥೆಗಳೇ ಆ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದವು. ಅಷ್ಟು ಹಿಂದಿನ ಮಾತೇಕೆ? ಉದ್ಯಮಿ ಮುಕೇಶ್ ಅಂಬಾನಿ ಅವರ ಪುತ್ರ ಆಕಾಶ್ ಅವರ ಮದುವೆ ಕಳೆದ ವರ್ಷವಷ್ಟೇ ಎಷ್ಟೊಂದು ವೈಭವದಿಂದ ನಡೆಯಿತು.